

ಹೃದಯಾಘಾತವಾದರೆ ವ್ಯಕ್ತಿಯ ಲೈಂಗಿಕ ಜೀವನ ಮುಗಿಯಿತು ಎಂಬ ಭಾವನೆ ತಪ್ಪು. ಸೂಕ್ತ ಚಿಕಿತ್ಸೆ ಪಡೆದು ಆರೋಗ್ಯ ಸುಸ್ಥಿತಿಯಲ್ಲಿ ಇದ್ದರೆ ಲೈಂಗಿಕ ಕ್ರಿಯೆ ನಡೆಸಿ ಸಂತೃಪ್ತಿಯ ಜೀವನ ನಡೆಸಬಹುದು.

■ ಡಾ.ಬಿ. ಸದಾನಂದ ನಾಯ್ಕ್

# ಹೃದಯಾಘಾತ

## ಲೈಂಗಿಕ ಜೀವನದ ಅಂತ್ಯವೇ?

ಹೃದಯಾಘಾತ ಅಂದರೆ ರೋಗಿಗೆ ಮತ್ತು ಕುಟುಂಬದ ಸದಸ್ಯರಿಗೆ ಜೀವನ್ಮರಣದ ಪ್ರಶ್ನೆಯಾಗಿರುತ್ತದೆ. ಇದರಿಂದ ಗುಣಮುಖರಾದಾಗ ಯಮನನ್ನೇ ಗೆದ್ದು ಬಂದಂತೆ ಅನ್ನಿಸುತ್ತದೆ. ಆಸ್ಪತ್ರೆಯಿಂದ ಬಿಡುಗಡೆಯಾಗುವಾಗ, ರೋಗಿ ಮತ್ತು ಅವರ ಸಂಗಾತಿಯರು, ರೋಗಿ ಸೇವಿಸಬೇಕಾದ ಔಷಧಿಗಳು, ಆಹಾರ ಪಥ್ಯ, ದೈಹಿಕ ಚಟುವಟಿಕೆಗಳು ಇತ್ಯಾದಿಗಳ ಬಗ್ಗೆ ಎಲ್ಲಾ ರೀತಿಯ ಸಂದೇಹಗಳನ್ನು ಕೇಳಿ ಮನದಟ್ಟು ಮಾಡಿಕೊಳ್ಳುತ್ತಾರೆ. ಅದೇ ರೀತಿ ವೈದ್ಯರು ಸಹಾ ಅತ್ಯಂತ ಮುತುವರ್ಜಿಯಿಂದ ಎಲ್ಲವನ್ನು ಕೂಲಂಕುಶವಾಗಿ ತಿಳಿ ಹೇಳುತ್ತಾರೆ. ಆದರೆ ರೋಗಿಗೆ ಮತ್ತು ಅವರ ಸಂಗಾತಿಯವರಿಗೆ ಒಂದು ವಿಷಯದ ಬಗ್ಗೆ ಕೇಳಲು ಅಸಾಧ್ಯವಾಗಿ ಸಂದೇಹ, ಸಂಶಯಗಳು ಮನಸ್ಸಿನಲ್ಲಿ ಹಾಗೆಯೇ ಉಳಿದುಕೊಳ್ಳುತ್ತವೆ.

ಹೃದಯಾಘಾತದ ನಂತರ ಲೈಂಗಿಕ ಕ್ರಿಯೆಯಲ್ಲಿ ತೊಡಗಬಹುದೇ, ಅದು ಜೀವಕ್ಕೆ ಸುರಕ್ಷಿತವೇ, ಈ ಬಗ್ಗೆ ವೈದ್ಯರಲ್ಲಿ ಕೇಳಲೇ, ಅವರು ತಪ್ಪಾಗಿ ಅರ್ಥೈಸುವರೇ.. ಇತ್ಯಾದಿ, ಇತ್ಯಾದಿ ಪ್ರಶ್ನೆಗಳು ಉದ್ಭವಿಸುವುದು ಸಹಜ. ವೈದ್ಯರು ಸಹ ಇಲ್ಲಿ ಅಸಹಾಯಕರಾಗಿ, ಈ ಬಗ್ಗೆ ಚಕಾರವೆತ್ತದೆ ಸಂದಿಗ್ಧ ಪರಿಸ್ಥಿತಿಗೆ ಬೀಳುತ್ತಾರೆ. ದಂಪತಿ ಸಹ 'ನೀನು ಕೇಳು.. ನೀನು ಕೇಳು' ಎನ್ನುತ್ತಾ ಸಮಯ ವ್ಯಯಿಸುತ್ತಾರೆ.

ನಮ್ಮ ಸಮಾಜದಲ್ಲಿ ಲೈಂಗಿಕ ಜೀವನದ ಬಗ್ಗೆ ಸಾರ್ವಜನಿಕವಾಗಿ ಮಾತನಾಡುವುದಕ್ಕೆ ಸ್ವಯಂ ಪ್ರೇರಿತ ನಿಷೇಧವಿದ್ದು, ಈ ಬಗ್ಗೆ ಅತಿಯಾದ ಮಡಿವಂತಿಕೆ ಮತ್ತು ಒಂದು ರೀತಿಯ ಅಘೋಷಿತ ಅಸ್ಪೃಶ್ಯತೆ ಇದೆ. ಈ ಸನ್ನಿವೇಶದಲ್ಲಿ ಅದು ಕೂಡ ರೋಗಿಯು ಆಗ ತಾನೇ ಹೃದಯಾಘಾತದಿಂದ ಚೇತರಿಸುತಿದ್ದಾಗ, ಲೈಂಗಿಕ ಕ್ರಿಯೆಯ ಬಗ್ಗೆ ಕೇಳುವುದು ಬಿಡಿ ಆಲೋಚಿಸುವುದು ಕೂಡ ತಪ್ಪೆಂದು ರೋಗಿ ಮತ್ತು ಸಂಗಾತಿಯರು ಎಂದುಕೊಳ್ಳುವುದು ಸಹಜ. ಈ ಸನ್ನಿವೇಶ ನಮ್ಮ ದೇಶದಲ್ಲಿ ಮಾತ್ರವಲ್ಲ, ಮುಂದುವರಿದ ದೇಶಗಳಲ್ಲೂ ಸರ್ವೇಸಾಮಾನ್ಯ ಎಂದು ವೈದ್ಯಕೀಯ ಸಮೀಕ್ಷೆಗಳಲ್ಲಿ ಕಂಡು ಬಂದಿದೆ.

ಹೃದಯಾಘಾತದ ನಂತರ ಲೈಂಗಿಕ ಜೀವನ ಪುನಃ ಪ್ರಾರಂಭಿಸಬಹುದೇ? ಇದರಿಂದ ಪ್ರಾಣಕ್ಕೆ ಅಪಾಯವಿದೆಯೇ? ಈ ಬಗ್ಗೆ ವೈದ್ಯ ವಿಜ್ಞಾನ ಏನೆನ್ನುತ್ತದೆ?

ಹೃದ್ರೋಗಿಗಳು ಲೈಂಗಿಕ ಜೀವನ ಪುನರಾರಂಭಿಸಲು ಇರುವ ಅಡ್ಡಿ ಆತಂಕಗಳು :

ಹೃದಯಾಘಾತದ ನಂತರ ಬಹಳಷ್ಟು ಪುರುಷರ ಶಿಶ್ನದ ನಿಮುರುವಿಕೆ [erection]ಕಡಿಮೆಯಾಗುತ್ತದೆಯೆಂದು ಹಲವಾರು ವೈದ್ಯಕೀಯ ಸಂಶೋಧನೆಗಳಿಂದ ಕಂಡು ಬಂದಿದೆ.

ಅದೇ ರೋಗಿಗೆ ಇರುವ ಇತರ ಸಹ ಕಾಯಿಲೆಗಳಾದ ಡಯಾಬಿಟಿಸ್, ಅಧಿಕ ರಕ್ತದ ಒತ್ತಡ, ಅಧಿಕ ಕೊಬ್ಬು, ಕೊಲೆಸ್ಟರಾಲ್, ಬೀಡಿ, ಸಿಗರೇಟ್ ಸೇವನೆ ಮತ್ತು ಮಾನಸಿಕ ಖಿನ್ನತೆ ಇತ್ಯಾದಿ ಗಳಿಂದ ಲೈಂಗಿಕ ಸಾಮರ್ಥ್ಯ ಕಡಿಮಯಾಗುವುದು.

ವೈದ್ಯಕೀಯ ಸಲಹೆ ಮತ್ತು ಮಾಹಿತಿಯ ಕೊರತೆ

ಮೈಥುನ ಕ್ರಿಯೆಯ ವೇಳೆ ಮತ್ತೆ ಹೃದಯಾಘಾತವಾಗಿ ಮರಣ ಹೊಂದುವ ಹೆದರಿಕೆ

ಸಂಗತಿಯ ಅಸಹಕಾರ, ಅಧೈರ್ಯ ಮತ್ತು ಅತಿಯಾದ ಕಾಳಜಿ [over caution or protection]

ಲೈಂಗಿಕ ಕ್ರಿಯೆ ಅಥವಾ ಮೈಥುನ ಕ್ರಿಯೆಯಲ್ಲಿ ಕೈಚೆಲ್ಲಿ ಸೋಲುವ ಹೆದರಿಕೆ

